ಇದೇನು ಸರ್ಕಾರ ಮುಲಗಿದೆಯೇ ಎಂದು ನಾನು ಕೇಳಬೇಕಾಗುತ್ತದೆ ಎಲ್ಲಾ ವಿವರಗಳನ್ನು ನಾವು ಕೊಟ್ಟು ಆವರಲ್ಲಿ ನಿಷ್ಠೂರ ಹೊಂದಿ ಮೊನ್ನೆ ಪತ್ರಿಕಾ ಸಂಪಾದಕರ ಕೊಲೆ ಆಯಿತಲ್ಲಾ ಆ ರೀತಿ ಸ್ಥಿತಿ ನಮ್ಮಲ್ಲೂ ಉದ್ಭವನಾಗಬೇಕೇ ? ತಮ್ಮ ಇಲಾಖೆ ಏನು ಮಾಡುತ್ತಿದೆ ? ಅಲ್ಲಿ ಕೋಟ್ಯಾಂತರ ರೂಪಾಯಿ ಆಸ್ತಿ ಲೂಟಿಯಾಗಿರುವಾಗ ತಾವು ಏಕೆ ಸುಮ್ಮನೆ ಕುಳಿತ್ತಿದ್ದೀರಿ ಬೇರೆ ರಾಜ್ಯದಿಂದ ಬಂದ ಜನ ಈ ರೀತಿ ಆಸ್ತಿ ಲೂಟಿ ಮಾಡುತ್ತಿರುವಾಗ ನಮ್ಮ ರಾಜ್ಯದ ಜನ ಎಲ್ಲಿಗೆ ಹೋಗಬೇಕು? ಅವರಿಗೆ ಸಾಮಾಗ್ರಿ ಒದಗಿಸಿದ ಮೇಲೆ ಸರ್ಕಾರ ಆ ಬಗ್ಗೆ ತನಿಖೆ ಮಾಡುವುದು ಬೇಡವೇ ?

ಶ್ರೀ ಎಸ್. ಆರ್. ಬೊಮ್ಮಾಯಿ —ಮಾನ್ಯ ಸದಸ್ಯರು 10 ವರ್ಷಗಳ ಹಿಂದಿನ ವಿಷಯವನ್ನು ಹೇಳುತ್ತಿದ್ದಾರೆ. ಆ ಬಗ್ಗೆ ಈಗ ಸರ್ಕಾರದಲ್ಲಿ ರೆಕಾರ್ಡ್ ಇಲ್ಲ. ಆದು ಇದ್ದಿದರೆ ನಾನೇ ಆ ಬಗ್ಗೆ ತನಿಖೆ ಮಾಡಿಸುತ್ತಿದ್ದೆ. ಈ ಸಂಸ್ಥೆ ಸರ್ಕಾರದಿಂದ ಏನೂ ಹಣವನ್ನು ಪಡೆದಿರುವ್ದಿಲ್ಲ ಹಾಗೂ ಸರ್ಕಾರ ಈ ಸೆಂಸ್ಥೆಯಲ್ಲಿ ತನ್ನ ಹಣವನ್ನು ತೊಡಗಿಸಿಲ್ಲ ಆದ್ದರಿಂದ ತನಿಖೆ ಮಾಡಲು ಒರುವ್ದಿಲ್ಲ ಆದರೂ ತಾವು ಏನು ಹೇಳುತ್ತಿದ್ದೀರಿ ಆ ಬಗ್ಗೆ ತನಿಖೆ ಮಾಡಿಸುತ್ತೇನೆ

ಶ್ರೀ ಎಂ ಎಸ್ ಕೃಷ್ಣನ್ —ಇದು ರೈತರಿಗೆ ಬೇಕಾಗತಕ್ಕ ಸೀನೆಗೊಬ್ಬರವನ್ನು ತಯಾರು ಮಾಡ ತಕ್ಕ ಕೈಗಾರಿಕೆಯಾಗಿದ್ದು 1973ರಲ್ಲಿ ಇದು ಸ್ಥಗಿತಗೊಂಡಿದ್ದು, ಅಲ್ಲಿಂದ ಈಚೆಗೆ ಅಲ್ಲಿ ಉತ್ಪಾದನೆಯಾಗು ತ್ತಿಲ್ಲ. ಆದ್ದರಿಂದ ಈ ಸಂಸ್ಥೆಯನ್ನು ಸರ್ಕಾರವೇ ವಹಿಸಿಕೊಂಡು ಆದರ ಉತ್ಪಾದನೆ ಪ್ರಾರಂಭ ಮಾಡಲು ಸಾಧ್ಯವಾಗುತ್ತದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರ ಇದನ್ನು ನಡೆಸುವ್ದಕ್ಕೆ ಆಗುವ್ದಿಲ್ಲ ಆಗಲೇ ಇದರಲ್ಲಿ ದುಡ್ಡು ನಷ್ಟವಾಗಿದೆ. ರಾಜ್ಯ ಸರ್ಕಾರವಾಗಲೀ ಅಥವಾ ರಾಜ್ಯ ಸರ್ಕಾರದ ಯಾವುದೇ ಸಂಸ್ಥೆ ಯಾಗಲೀ ಇದರಲ್ಲಿ ಹಣವನ್ನು ತೊಡಗಿಸಿಲ್ಲ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ ಇದರಲ್ಲಿ ರಾಜ್ಯ ಸರ್ಕಾರದ ಹಣ ಹೂಡಿಕೆ ಆಗದೇ ಇರ ಬಹುದು ಆದರೆ ಹೊರಗಿನ ಜನ ಇಲ್ಲಿ ಬಂದು ಲೈಸೆನ್ಸ್ ಪಡೆದು ಇಂತಹ ದುರ್ವ್ಯವಹಾರ ಮಾಡಿದರೆ ಅವರಿಗೆ ಮುಟ್ಟುಗೋಲು ಹಾಕುವ್ದಕ್ಕೆ ಆಗುವ್ದಿಲ್ಲವೇ ? ಇನ್ನತ್ತ ಸರ್ಕಾರ ಅಲ್ಲಿ ಹಣ ಹೂಡಿಕೆ ಮಾಡದಿದ್ದರೆ ಏನೆಂದರೆ ಸರ್ಕಾರಿ ಬ್ಯಾಂಕ್ ಆದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದವರು ಈ ಸಂಸ್ಥೆಗೆ ಸಾಲವನ್ನು ಕೊಟ್ಟಿಲ್ಲವೇ ? ರಾಜ್ಯವಷ್ಟೆ ಇರಬಹುದು ಅಥವಾ ದೇಶ ವಷ್ಟೆ ಇರಬಹುದು ಒಟ್ಟಿನಲ್ಲಿ ಸರ್ಕಾರಿ ಬ್ಯಾಂಕಿನ ಹಣ ಇಲ್ಲಿ ಹೂಡಿಕೆಯಾಗಿಲ್ಲವೇ ?

ಶ್ರೀ ಎಸ್. ಆರ್ ಬೊಮ್ಮಾಯಿ — ಆ ಸಂಸ್ಥೆಗೆ ಮುಟ್ಟುಗೋಲು ಹಾಕಬೇಕಾದರೆ ಅದರಲ್ಲಿ ಸರ್ಕಾರದ ಹಣ ಹೂಡಿಕೆಯಾಗಿರಬೇಕು. ಕೇಂದ್ರ ಸರ್ಕಾರದ ಅಡಳಿತದಲ್ಲಿ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಹಣ ಅಲ್ಲಿಗೆ ಸಾಲರೂಪವಾಗಿ ಹೋಗಿದೆ ಆ ಬಗ್ಗೆ ಕಾರ್ಯಕ್ರಮ ಅವರ ಮೇಲೆ ಗೆಡುಕೊಳ್ಳಬಹುದು. ಕಾನೂನು ಪ್ರಕಾರ ರಾಜ್ಯ ಸರ್ಕಾರ ಈ ಸಂಸ್ಥೆ ಬಗ್ಗೆ ಏನೂ ಮಾಡುವುದೇ ಕ್ಕಾಗುವುದಿಲ್ಲ. ಆದರೂ ತಾವು ಏನು ಹೇಳಿದ್ದೀರಿ ಆ ಬಗ್ಗೆ ಏನಾದರೂ ದುರ್ವ್ಯವಹಾರ ಇದ್ದರೆ ನಾನು ವಿಚಾರ ಮಾಡಿಸುತ್ತೇನೆ.

ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕು (ಸಂಡೂರು ಮ್ಯಾಂಗನೀಸ್ ಐರನ್ ಓರ್) ಕಾರ್ಖಾನೆಯ ಕೂಲಿಗಾರರು ಮುಷ್ಕರ ಹೂಡಿರುವುದರ ಬಗ್ಗೆ.

ಪ್ರಶ್ನೆಸಂಖ್ಯೆ 301 (332) ಶ್ರೀ ಜನ್ನಬಸವನ ಗೌಡ ಕೆ. (ಕೊಡ್ಲಿಗಿ) -- ಮಾನ್ಯ ಕಾರ್ಮಿಕ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಳ್ಳಾರಿ ಜಿಲ್ಲಾ ಹೊಸಪೇಟೆ ತಾಲ್ಲೂಕು (ಸೊಂಡೂರು ಮ್ಯಾಂಗನೀಸ್ ಓರ್) ಕಾರ್ಖಾನೆ ಕೂಲಿ ಗಾರರು ಕಳೆದ ಒಂದು ತಿಂಗಳಿಂದ ಮುಷ್ಕರ ಹೂಡಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ ಕೂಲಿಗಾರರ ಬೇಡಿಕೆಗಳನ್ನು ಈಡೇರಿಸಲು ವಿಫಲವಾಗಿರುವುದಕ್ಕೆ ಕಾರಣಗಳೇನು ;

ಇ) ಇಸದರಿ ಕಂಪನಿಯವರು ವಿದ್ಯುಚ್ಛಕ್ತಿ ಇಲಾಖೆಗೆ ನೀಡಬೇಕಾದ ಬಾಕಿ ಏನಾದರೂ ಇದೆಯೇ ?

ಶ್ರೀ ಆಜೀಜ್‌ಸೇಠ್ (ಕಾರ್ಮಿಕ ಹಾಗೂ ವಕ್ಫ್ ಮಂತ್ರಿಗಳು).--

ಈ) ಈಗ ಮುಷ್ಕರ ಇಲ್ಲ ಕೆಲಸಗಾರರು ಕೆಲಸಕ್ಕೆ ವಾಪಸ್ ಆಗಿದ್ದಾರೆ ಮತ್ತು ವಿವಾದ ವಿಷಯಗಳನ್ನು ಹುಬ್ಬಳ್ಳಿಯ ಕಾರ್ಮಿಕ ನ್ಯಾಯಾಲಯಕ್ಕೆ ಒಪ್ಪಿಸಲಾಗಿದೆ.

ಉ) ವಿಷಯ ಪರಿಶೀಲನೆಯಲ್ಲಿದೆ. ಬೇಡಿಕೆಗಳನ್ನು ಈಡೇರಿಸಲು ವಿಫಲವಾಗಿರುವ ಪ್ರಶ್ನೆಯು ಉದ್ಭವಿಸುವುದಿಲ್ಲ.

ಊ ಜನವರಿ 84ರ ವರೆವಿಗೂ 2 12,04,300-18 ಬಾಕಿ ಇವೆ ಎಂದು ಗೊತ್ತಾಗಿದೆ.

ಶ್ರೀ ಎ ಲಕ್ಷ್ಮೀಸಾಗರ್.-- ಅಧ್ಯಕ್ಷರೇ, ಮಾನ್ಯ ಕಾರ್ಮಿಕ ಮಂತ್ರಿಗಳ ಪರವಾಗಿ ನಾನು ಈ ಪ್ರಶ್ನೆಗೆ ಉತ್ತರ ಕೊಡಬಯಸುತ್ತೇನೆ.

ಶ್ರೀ ಕೆ. ಚಿನ್ನಬಸವನಗೌಡ. – ಅಧ್ಯಕ್ಷರೇ ಮಾನ್ಯ ಮಂತ್ರಿಗಳಿಂದ ಸತ್ಯಕ್ಕೆ ದೂರವಾದ ಉತ್ತರ ಬಂದಿದೆ. ಕಾರ್ಮಿಕರ ಪೈಕಿ ಸುಮಾರು 70 ಜನರನ್ನು ಅಮಾನತ್ತಿನಲ್ಲಿ ಇಟ್ಟು ಆ ರ ಮೇಲೆ ಕ್ರಿಮಿನಲ್ ಕೇಸ್ ಹಾಕಿದಾರೆ ಈ ಬಗ್ಗೆ ಮಾನ್ಯ ಆಜೀಜ್ ಸೇಟ್ ಅವರಿಗೆ ಕೇಳಿದರೂ ಸಹಾ ಅವರು ಯಾವುದೇ ಕಾರ್ಯಕ್ರಮ ತೆಗೆದುಕೊಂಡಿಲ್ಲ ಈ ಸರ್ಕಾರ ಕೂಲಿ ಕಾರ್ಮಿಕರ ಹಿತವನ್ನು ರಕ್ಷಣೆ ಮಾಡುತ್ತದೆಯೋ ಅಥವಾ ಆ ಕಾರ್ಖಾನೆಯ ಮಾಲೀಕರು ಹೇಳಿದ ಹಾಗೆ ಕೇಳುತ್ತಿದೆಯೋ ?

ಶ್ರೀ ಎ. ಲಕ್ಷ್ಮೀಸಾಗರ್.-- ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಸರಿಯಾದ ಉತ್ತರವನ್ನೇ ಕೊಟ್ಟಿದ್ದೇನೆ.

''ಬಳ್ಳಾರಿ ಜಿಲ್ಲಾ ಹೊಸಪೇಟೆ ತಾಲ್ಲೂಕು (ಸೊಂಡೂರು ಮಾಂಗನೀಸ್ ಓರ್) ಕಾರ್ಖಾನೆ ಕೂಲಿಗಾರರು ಕಳೆದ ಒಂದು ತಿಂಗಳಿಂದ ಮುಷ್ಕರ ಹೂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ''

ಎಂದು ಕೇಳಿದ ಪ್ರಶ್ನೆಗೆ

''ಈಗ ಮುಷ್ಕರ ಇಲ್ಲ''

ಎಂಬ ಉತ್ತರವನ್ನು ಕೊಟ್ಟಿದ್ದೇನೆ.

ಶ್ರೀ ಪಂಪಾಪತಿ.-- ಅಲ್ಲಿ ಈಗ ಮುಷ್ಕರ ಇಲ್ಲ ಆದರೆ 150-200 ಜನರನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ? ಈ ಬಗ್ಗೆ ಸರ್ಕಾರ ಏನಾದರೂ ಯೋಜನೆ ಮಾಡಿದೆಯೇ ? ಈ ಕೆಲಸಗಾರರು ಹೊರಗಡೆ ಇದ್ದು ನಿರುದ್ಯೋಗದಲ್ಲಿ ಬಳಲಬೇಕೆಂಬ ಅಭಿಪ್ರಾಯ ಸರ್ಕಾರಕ್ಕೆ ಇದೆಯೇ

ಉತ್ತರವಿಲ್ಲ

ಶ್ರೀ ಎಂ. ಎಸ್ ಕೃಷ್ಣನ್. — ಮಾಲೀಕರನ್ನು ಹದ್ದುಬಸ್ತಿಗೆ ತರತಕ್ಕ ತಾಕತ್ತು ಸರ್ಕಾರಕ್ಕೆ ಇದೆಯೇ ನೋಡಬೇಕಾಗುತ್ತದೆ.

ಶ್ರೀ ಎ ಲಕ್ಷ್ಮೀಸಾಗರ್ -- ಕಾನೂನಿಗೆ ವಿರುದ್ಧವಾಗಿದ್ದರೆ, ಅವರು ಎಂತಹವರೇ ಆಗಿರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಸಾಕಷ್ಟು ಶಕ್ತಿ ಇದೆ.

ಶ್ರೀ ಎಂ. ಎಸ್ ಕೃಷ್ಣನ್.-- ಅಧ್ಯಕ್ಷರೇ, ಬುರುಡೆ ಕೇಳಿ, ಕೇಳಿ ನಮಗೂ ಸಾಕಾಗಿದೆ.

ಶ್ರೀ ಎ ಲಕ್ಷ್ಮೀಸಾಗರ್.-- ಮೊದಲು ನಾವು ಕೇಳುವ ಕೆಲಸವನ್ನು ಕಾನೂನು ಪ್ರಕಾರ ಮಾಡಬೇಕಾಗುತ್ತದೆ

ಶ್ರೀ ಶಂಕರಗೌಡ.-- ಅಧ್ಯಕ್ಷರೆ, ಅಲ್ಲಿ ನವೆಂಬರ್ 30 ರಿಂದ ಸ್ಟ್ರೈಕ್ ಮಾಡಿದರು. ನಾವು ಡಿಸೆಂಬರ್ 25-26 ರಂದು ಲೇಬರ್ ಮಿನಿಸ್ಟರಿಗೆ ಭೇಟಿಯಾಗಿದ್ದೆವು. ಕಾನೂನು ಪ್ರಕಾರ ಮಾಡಿಲ್ಲ ಎಂದು ಲೇಬರ್ ಯೂನಿಯನ್ ಬ್ಯಾನ್ ಮಾಡಿದ್ದರು. ಉಳಿದವರನ್ನು ಸೇರಿಸಲಿಕ್ಕೆ ಸ್ಥಳೀಯ ಮುಖಂಡರನ್ನು ಸೇರಿಸಿ ಜನವರಿ 4-5 ಖಾಟಿಂಗ್ ಕರೆದು ವ್ಯವಸ್ಥೆ ಮಾಡೋಣ ಎಂದು ಹೇಳಿದರು. ಅವರು ಹಾಸಾಸ್ಯದವಾಗಿ ಮಾತನಾಡುತ್ತಾರೆ. ಬಡವರ ಬಗ್ಗೆ ಕನಿಕರ ಇಲ್ಲ ಎಂದು ಕಾಣುತ್ತದೆ. ಅವರನ್ನು ತೆಗೆದುಕೊಳ್ಳುವಂತೆ ಮಾಡಲು ಸರ್ಕಾರ ಅಸಕ್ತಿ ವಹಿಸಬೇಕು ಎಂದು ಹೇಳುತ್ತೇನೆ.

ಶ್ರೀ ಎಲಕ್ಷ್ಮೀಸಾಗರ್.—ಕಾರ್ಮಿಕರ ಬಗ್ಗೆ ಸರ್ಕಾರಕ್ಕೆ ಸಂಪೂರ್ಣ ಸಹಾನುಭೂತಿ ಇದೆ. ಆ ಬಗ್ಗೆ ಕೆಲವು ವಿವರಗಳನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಅವರು ಸ್ಟ್ರೈಕ್ ಮಾಡಿ ಏನು ಕೇಳಿದರು ಅಂದರೆ, Payment of bonus, Ex-gratia, Supply of foodgrains among other things. ನವೆಂಬರ್ 30 9 1883 ಸ್ಟ್ರೈಕ್ ಮಾಡಿದರು. ಇದು ಆದಮೇಲೆ ಸ್ಟ್ರೈಕ್ ನಿಂತುಹೋಯಿತು. ಸ್ಟ್ರೈಕ್ ಪೀರಿಯಡ್ ಪ್ರೊಟೆಸ್ಟ್ ಪೀರಿಯಡ್ ಆಗಿ ತೆಗೆದುಕೊಳ್ಳಬೇಕು. ಆ ಪೀರಿಯಡ್‌ಗೆ ವೇಜಸ್ ಕೊಡಬೇಕು, ಅದರಲ್ಲಿ ಯಾರು ಪಾರ್ಟಿಸಿಪೇಟ್ ಮಾಡಿದರು ಅವರ ಮೇಲೆ ಕ್ರಮ ತೆಗೆದುಕೊಳ್ಳಬಾರದು ಎಂದು ವರ್ಕರ್ಸ್ ಕೇಳಿದ್ದಾರೆ. ಉಳಿದ ಬೇಡಿಕೆಗಳನ್ನು ಲೇಬರ್ ಕೋರ್ಟಿಗೆ ಅಡ್ಜುಡಿಕೇಷನ್‌ಗೆ ಆರ್ಡರ್ ಮಾಡಿದ್ದಾರೆ. ಅಲ್ಲಿಯೇ ಅವುಗಳನ್ನು ಇತ್ಯರ್ಥ ಮಾಡಬೇಕಾಗಿದೆ ಕಾರ್ಮಿಕರ ಹಿತರಕ್ಷಣೆ ಮಾಡುವುದಿಲ್ಲ ಎಂದು ಮಾನ್ಯ ಸದಸ್ಯರು ಏನು ಆಪಾದನೆ ಮಾಡಿದ್ದಾರೆ ಅದು ಆಧಾರರಹಿತವಾದುದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಚನ್ನಬಸವನಗೌಡ.—ಬೋನಸ್ ಕೊಡತಕ್ಕ ವಿಚಾರದಲ್ಲಿ ಪ್ರತಿ ತಿಂಗಳು 30ನೇ ತಾರೀಖು ಕೊಟ್ಟಾರೆಯೇ ವಿಚಾರ ಮಾಡಬೇಕು ಇನ್ನು ಎಕ್ಸ್‌ಗ್ರೇಷಿಯ ಕೊಡತಕ್ಕದ್ದು ಅವರ ಹೆಸರಿಗೆ ಜಮಾ ಬರೆಯುತ್ತಿದ್ದಾರೆ ಅದು ನ್ಯಾಯಕ್ಕೇ ? ಮೆಡಿಕಲ್ ಬಿಲ್ಲು ಪ್ರತಿ ವರ್ಷ ೫೦೦ ರೂಪಾಯಿ ಕೊಡಬೇಕಾಗಿದ್ದು ಕೊಟ್ಟಿಲ್ಲ 20 ಕೆ. ಜಿ. ರೈಸ್ ಮತ್ತು ಜೋಳ ಕೊಡುತ್ತಿದ್ದುದನ್ನು ಕಟ್ ಮಾಡಿದ್ದಾರೆ. ಇನ್ನು ಹೋಟೆಲ್ ತಿಂಡಿ ಬೆಲೆ 65 ಪೈಸೆ ಇದ್ದುದನ್ನು ರೂ. 1-೦೦ ಪೈಸೆಗೆ ಏರಿಸಿದ್ದಾರೆ ಈ ಕಾರಣಗಳಿಂದ ಅಲ್ಲಿ ಸ್ಟ್ರೈಕ್ ಮಾಡಿದರು. ಆ ಸಂದರ್ಭದಲ್ಲಿ ಅಸಿಸ್ಟೆಂಟ್ ಕಮೀಷನರ ಮತ್ತು ಡಿ. ವೈ ಎಸ್. ಪಿ. ಅವರೆಲ್ಲಾ ಸೇರಿ ರಾಜಿ ಮಾಡಲಿಕ್ಕೆ ಪ್ರಯತ್ನಪಟ್ಟರು ಶ್ರೀಮಾನ್ ವೇಣುಗೋಪಾಲಾಚಾರ್ ಮತ್ತು ಫೋರ್ಜಡೆಯವರು ಅವರೆಲ್ಲಾ ಹೇಳಿದಕ್ಕೆ ಒಪ್ಪಿಕೊಂಡರು. ಎಲ್ಲರನ್ನೂ ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಹೇಳಿದರು. ಆದರೆ ಮ್ಯಾನೇಜಿಂಗ್ ಡೈರೆಕ್ಟರ್ ಒಪ್ಪಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಹಿತ ರಕ್ಷಣೆ ಮಾಡುತ್ತೇನೆಂದು ಹೇಳಿದಿರಿ. ಈಗ ಟರ್ಮಿನೇಟ್ ಆದವರು ಕೋರ್ಟಿಗೆ ಹೋದರೆ ನಷ್ಟಾನುಗಟ್ಟಿಲೆ ಆಗುತ್ತದೆ. ಸ್ಟ್ರೈಕ್ ಮಾಡಿದಂಥ ಸಂದರ್ಭದಲ್ಲಿ ಅವರನ್ನು ತೆಗೆದಿರುವ ವಿಚಾರ ಇರುವುದರಿಂದ. ಮಂತ್ರಿಗಳು, ಹಾಗೂ ಮುಖ್ಯಮಂತ್ರಿಗಳು ಮಧ್ಯ ಪ್ರವೇಶ ಮಾಡಿ ಅವರನ್ನು ತೆಗೆದುಕೊಳ್ಳುವಂಥ ಭರವಸೆ ಕೊಡಬೇಕು ವರ್ಕರ್ಸ್ ಮತ್ತು ಯೂನಿಯನ್ ಅವರನ್ನು ಕರೆಸಿ ತೀರ್ಮಾನ ಮಾಡುವಂಥ ಭರವಸೆಯನ್ನು ಮಾನ್ಯ ಮಂತ್ರಿಗಳು ಕೊಡಬೇಕು.

ಶ್ರೀ ಎ ಲಕ್ಷ್ಮಿಸಾಗರ್ -ಸಂಬಂಧಪಟ್ಟ ಮಂತ್ರಿಗಳಿಗೆ ಹಾಗೂ ಇಲಾಖೆಯವರಿಗೆ ಹೇಳಿ ಆ ರೀತಿಯ ಪ್ರಯತ್ನ ಮಾಡುತ್ತೇನೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ:

ಶ್ರೀ ಪಂಪಾಪತಿ —ಕೆಲಸಗಾರರು ತಮ್ಮ ಬೇಡಿಕೆಗಳನ್ನು ಕೊಟ್ಟಿದ್ದಾರೆ. ಆ ಸಂದರ್ಭದಲ್ಲಿ ಪೋಲೀಸರನ್ನು ಲಾಠಿ ಚಾರ್ಜ್‌ಮಾಡಿ, ಅವರುಗಳನ್ನು ಆಪರಾಧಿಗಳನ್ನಾಗಿ ಮಾಡಿ ಹೊರಗಡೆ ನಿಲ್ಲಿಸಿದ್ದೀರಿ. ಅವರು ಬೇಡಿಕೆ ಕೇಳಿದ್ದು ತಪ್ಪಾಗಿದೆಯೇ ? ಮಾನ್ಯ ಮಂತ್ರಿಗಳು ಸರಿಯಾದ ನಿರ್ಧಾರವನ್ನು ತರಿಸಿಕೊಂಡು ನ್ಯಾಯ ಒದಗಿಸಿ. ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಕೆ ಚನ್ನಬಸವನಗೌಡ.—ಅವರು ಕೆ ಇ ಬಿ. ಅವರಿಗೆ ೭ ಕೋಟಿ ರೂಪಾಯಿ ಬಾಕಿ ಕೊಡುವಂತಾದು ಇದೆ. ಬೇರೆ ಯಾರಾದರೂ ಆಗಿದ್ದರೆ, ಮಾರನೆಯ ದಿನಸವೇ ಅವರಿಗೆ ವಿದ್ಯುಚ್ಛಕ್ತಿ ಸರಬರಾಜು ನಿಲ್ಲಿಸುತ್ತಿದ್ದೀರಿ. ಇದನ್ನು ಏತಕ್ಕೆ ಬಿಟ್ಟಿದ್ದೀರಿ ದಯಮಾಡಿ ತಿಳಿಸಬೇಕು.

ಶ್ರೀ ಎ. ಲಕ್ಷ್ಮಿಸಾಗರ್.—ಮಾನ್ಯ ಸದಸ್ಯರು ಹಣ ಕಟ್ಟುವುದಕ್ಕಿದ್ದು ಬಾಕಿ ಇದೆ ಎಂದು ಹೇಳಿದ್ದಾರೆ. ಇದನ್ನು ನಾನು ವಿವರಿಸುತ್ತೇನೆ. ಹಾಗೂ ಕ್ರಮ ತೆಗೆದುಕೊಳ್ಳಲಿಕ್ಕೆ ಹೇಳುತ್ತೇನೆ.

ಗುಲ್ಬರ್ಗ ಜಿಲ್ಲೆಯಲ್ಲಿ ಸುಣ್ಣದಕಲ್ಲಿನ ಗಣಿ ಲೀಸ್ ಕೊಡುವ ಬಗ್ಗೆ

ಪ್ರಶ್ನೆ ಸಂಖ್ಯೆ.—303 (517) ಶ್ರೀ ಕೆ. ಬಿ. ಶಾಣಪ್ಪ (ಹುಮನಾಬಾದ್) ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗ ಜಿಲ್ಲೆಯಲ್ಲಿ ಸುಣ್ಣದಕಲ್ಲು ಹೇರಳವಾಗಿದೆ ಎಂಬುದು ಸರ್ಕಾರದವರಿಗೆ ಗೊತ್ತಿದೆಯೆ ?

ಆ) ಈ ಸುಣ್ಣದ ಕಲ್ಲನ್ನು ಕ್ವಾರಿಯಾಗಿ ಮಾಡಲು ಎಷ್ಟು ಜನರು ಈ ಜಿಲ್ಲೆಯಲ್ಲಿ ಗೇಣಿಗೆ ತೆಗೆದುಕೊಂಡಿದ್ದಾರೆ ?

ಇ) 1982-83 ರಲ್ಲಿ ಗೇಣಿಯಿಂದ ಸರ್ಕಾರಕ್ಕೆ ರಾಜಧನ ರೂಪದಲ್ಲಿ ಸಂದಾಯವಾದ ಮೊಬಲಗು ಎಷ್ಟು ?

ಈ) ಈ ರೀತಿ ಗೇಣಿ ಕೊಡುವಾಗ ಆಕ್ಷೇಪಣಾ ರಹಿತಾ ಪತ್ರ ಇಲ್ಲನೆ ಇದ್ದರೂ ಸರ್ಕಾರದವರು ಗೇಣಿಗೆ ಕೊಟ್ಟಿದ್ದು ಸರಿಯೇ ?

ಉ) ಹಾಗಿದ್ದಲ್ಲಿ ಇಂತಹ ಕ್ವಾರಿಗಳೆಷ್ಟು ? ಮತ್ತು ಸರ್ಕಾರ ಇವುಗಳ ಬಗ್ಗೆ ಯಾವ ಕ್ರಮುಗಳನ್ನು ತೆಗೆದುಕೊಂಡಿದ್ದಾರೆ ?

ಊ) ಗುಲ್ಬರ್ಗದಲ್ಲಿ ಮತ್ತು ರಾಜ್ಯದ ರಸ್ತೆಗಳ ಪಕ್ಕದಲ್ಲಿ ಈ ಕ್ವಾರಿ ಕೆಲಸ ನಡೆದಿದ್ದು ಸರ್ಕಾರವರ ಗಮನಕ್ಕೆ ಬಂದಿದ್ದಲ್ಲಿ ಇಂತಹವುಗಳನ್ನು ತಡೆಯಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕೈಗಾರಿಕಾ ಮಂತ್ರಿಗಳು (ಅ) ಗೊತ್ತಿದೆ.

ಆ) 650 ಜನರು ಗೇಣಿಗೆ ತೆಗೆದುಕೊಂಡಿದ್ದಾರೆ.